# ಕರ್ನಾಟಕ ವಿಧಾನ ಸಭೆ

## ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ ಮಾದೇಗೌಡ ಇವರು ನಿಯಮ 72ರಡಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ

**ಪ್ರಸ್ತಾವನೆ:**

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ತತ್ವ ಸಿದ್ಧಾಂತ, ವಿಚಾರಧಾರಗಳ ಬಗ್ಗೆ ಯುವಜನರಲ್ಲಿ ಸ್ಫೂರ್ತಿ ತುಂಬಲು ಎಲ್ಲಾ ಜಿಲ್ಲೆಗಳಲ್ಲಿ 'ಗಾಂಧಿ ಭವನ'ಗಳನ್ನು ಸರ್ಕಾರದ ವತಿಯಿಂದ ನಿರ್ಮಿಸಲಾಗುತ್ತಿದೆ. ಆದರೆ, ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾ ಕೇಂದ್ರದಿಂದ ಸುಮಾರು 12 ಕಿ.ಮೀ. ದೂರದಲ್ಲಿರುವ ಮಂಡ್ಯ ತಾಲ್ಲೂಕಿನ ಬಿ.ಹೊಸೂರು ಕಾಲೋನಿಯಲ್ಲಿ 'ಗಾಂಧಿ ಭವನ'ವನ್ನು ನಿರ್ಮಿಸಲಾಗಿದೆ. ಇದಕ್ಕಾಗಿ, ಕೋಟ್ಯಂತರ ರೂಪಾಯಿ ವೆಚ್ಚ ಭರಿಸಲಾಗಿದೆ. ಆದರೆ, ಇಂದಿಗೂ ಈ 'ಗಾಂಧಿ ಭವನ' ಉದ್ಘಾಟನೆಯಾಗದೆ ನಿರುಪಯುಕ್ತವಾಗಿದ್ದು ಪಾಳು ಕೊಂಪೆಯಂತೆ ಆಗಿದೆ.

'ಗಾಂಧಿ ಭವನ'ದ ಕಟ್ಟಡವನ್ನು ಉತ್ತಮವಾಗಿ ನಿರ್ಮಿಸಲಾಗಿದೆ. ಕಟ್ಟಡದ ಸುತ್ತಲೂ ಕಾಂಪೌಂಡ್ ಹಾಕಲಾಗಿದೆ. ಹೊರಭಾಗದ ಗೋಡೆಗಳ ಮೇಲೆ ಗಾಂಧೀಜಿಯವರ ಜೀವನದ ವಿವಿಧ ಹಂತಗಳ ಪಟಗಳು, ಸಂದೇಶಗಳೂ ಇವೆ. ಆದರೆ, 'ಗಾಂಧಿ ಭವನ' ಮಾತ್ರ ಇಂದಿಗೂ ಉದ್ಘಾಟನೆ ಆಗಿಲ್ಲ. 'ಗಾಂಧಿ ಭವನ' ನಿರ್ಮಾಣ ಹಿಂದಿನ ಉದ್ದೇಶ ಈಡೇರಬೇಕಿದ್ದರೆ ಬಾಕಿ ಉಳಿದಿರುವ ಕೆಲಸಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ ಸಾರ್ವಜನಿಕ ಬಳಕೆಗೆ ಲಭ್ಯವಾಗುವಂತೆ ನೋಡಿಕೊಳ್ಳಬೇಕಿದೆ. ಹಾಗಾಗಿ, ಈ ಕುರಿತು ನಿಯಮ 72ರಡಿ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ :**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಗಾಂಧಿಭವನ ನಿರ್ಮಾಣಕ್ಕಾಗಿ ಮಂಡ್ಯ ಜಿಲ್ಲೆಯ ಮಂಡ್ಯ ತಾಲ್ಲೂಕಿನ ಕೆರಗೋಡು ಹೋಬಳಿಯ ಬಿ. ಹೊಸೂರು ಗ್ರಾಮದ ಸ.ಸಂ 53/7 ರಲ್ಲಿ 36 ಗುಂಟೆ ಜಮೀನನ್ನು ಜಿಲ್ಲಾಡಳಿತದಿಂದ ಮಂಜೂರಾಗಿರುತ್ತದೆ.

ರಾಜ್ಯಾದ್ಯಂತ ಗಾಂಧಿಭವನ ನಿರ್ಮಾಣಕ್ಕೆ ಪ್ರತೀ ಗಾಂಧಿ ಭವನಕ್ಕೆ ರೂ.3.00ಕೋಟಿ ನಿಗದಿಯಾಗಿರುವಂತೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಮಂಡ್ಯ ಜಿಲ್ಲಾಧಿಕಾರಿಗಳ ಖಾತೆಗೆ ದಿನಾಂಕ:31-12-2016 ರ ಚೆಕ್ ಮೂಲಕ ರೂ.20.00 ಲಕ್ಷ ಹಾಗೂ ಆನ್ ಲೈನ್ ಮೂಲಕ ರೂ.2.80 ಕೋಟಿ, ಒಟ್ಟು ರೂ.3.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ದಿನಾಂಕ:24-10-2019ರ ಆದೇಶದನ್ವಯ ರೂ.3.00 ಕೋಟಿ ವೆಚ್ಚದಲ್ಲಿ ನಿರ್ಮಿತಿ ಕೇಂದ್ರದಿಂದ ಗಾಂಧಿ ಭವನ ನಿರ್ಮಾಣ ಕೈಗೊಳ್ಳಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುತ್ತದೆ.

ದಿನಾಂಕ:09-01-2020 ರಂದು ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರಿಗೆ ರೂ. 2.25 ಕೋಟಿ ಹಾಗೂ ದಿನಾಂಕ:15-04-2024 ರಂದು ರೂ.50.00 ಲಕ್ಷ ಒಟ್ಟು ರೂ.2.75 ಕೋಟಿಗಳನ್ನು ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರಿಗೆ ಗಾಂಧಿ ಭವನ ನಿರ್ಮಾಣಕ್ಕಾಗಿ ಜಿಲ್ಲಾಡಳಿತದಿಂದ ಬಿಡುಗಡೆ ಮಾಡಲಾಗಿರುತ್ತದೆ. ತಾಂತ್ರಿಕ ಕಾರಣಗಳಿಂದಾಗಿ ಉಳಿದ ಮೊತ್ತವು ವ್ಯಪಗತವಾಗಿರುವುದರಿಂದ ಸದರಿ ಅನುದಾನದ ಬಿಡುಗಡೆಗೆ ನಿಯಮಾನುಸಾರ ಪರಿಶೀಲಿಸಿ ಮುಂದಿನ ಕ್ರಮವಹಿಸಲಾಗುವುದು.

ಗಾಂಧಿಭವನವು ಸುಸಜ್ಜಿತವಾಗಿ ನಿರ್ಮಾಣವಾಗುತ್ತಿದ್ದು, ಕಟ್ಟಡ ಕಾಮಗಾರಿ ಪೂರ್ಣವಾಗಿದ್ದು, ಮಹಾತ್ಮ ಗಾಂಧೀಜಿಯವರ ಮೂರ್ತಿ, ಗ್ಯಾಲರಿಯಲ್ಲಿ ಭಾವಚಿತ್ರಗಳು, ಪೀಠೋಪಕರಣ, ಧ್ವನಿವರ್ಧಕ ಸೇರಿದಂತೆ ಸಣ್ಣ ಪುಟ್ಟ ಕಾಮಗಾರಿಗಳು ಬಾಕಿ ಇರುತ್ತದೆ. ಮಂಡ್ಯ ಜಿಲ್ಲೆಯ ಗಾಂಧಿಭವನ ಕಾಮಗಾರಿಯು ಅಂತಿಮ ಹಂತದಲ್ಲಿದ್ದು, ಉದ್ಘಾಟನೆಯಾದ ನಂತರ ಸಾರ್ವಜನಿಕ ಬಳಕೆಗೆ ಲಭ್ಯವಾಗುವಂತೆ ಜಿಲ್ಲಾಡಳಿತಕ್ಕೆ ಹಸ್ತಾಂತರಿಸಲಾಗುವುದು.

**ಕೆಸಿಐ-ಪಿಐಪಿ/229/2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ